# ರಣಹದ್ದುಗಳ ದೀಕ್ಷೆ



ಗೊತ್ತಲ್ಲ ಆ ಕಾಲದ ಜೀಮೂತ ಪಕ್ಷಿಗಳು... ಈಗ ಕಾಲ ಬದಲಾಗಿದೆ. ಶವ ಸಂಸ್ಕಾರಗಳ ಈ ಹೆಣಗಳ ಭಕ್ಷ್ಯಣೆಯ ವಿಧಿಗಳಿಗೆ ತಪ್ಪುವ ಹೆಣಗಳನ್ನು ತಿಂದು ಬದುಕುತ್ತಿದ್ದ ಆ ರಣ ಹದ್ದುಗಳೀಗ ಅಳಿವಿನ ಅಂಚಿನಲ್ಲಿವೆ. ಪಾಪ, ಹೆಣಗಳ ಪುಣ್ಯ ರಣಹದ್ದುಗಳಿಗೆ ತಿನಿಸಿ ಅವುಗಳ ಉಳಿಸಬೇಕು ಎಂದು ಜೀವ ರಕ್ಷಕರ ಚಳವಳಿ ಅತ್ತೊಂದೆಡೆ ಇತ್ತು. ಆ ರಣ ಹದ್ದುಗಳು ಹಿಂದಿನಿಂದಲೂ ಪಾಪ ಕರ್ಮಗಳಿಂದಲೂ ಯುದ್ಧಗಳಿಂದಲೂ ಹೆಣಗಳ ತಿಂದು ಕೊಟ್ಟು ಹೋಗಿ ಈಗ ಬಡವಾಗಿ ಹೆಣದಂತೆ ಕಾರುತ್ತಿದ್ದವರ ಮೇಲೇ ಹದ್ದಿನಂತಿದ್ದವರ ತಲೆ ಮೇಲೂ ಆಸೆಯಲಿ ಹಾರಾಡುತ್ತಿದ್ದವು.

ಅದು ಇದು ಮಾನವ ಘನತೆಯೇ; ಸಂಸ್ಕಾರ ಧರ್ಮ ವಿಧಿಯೇ... ಮನುಷ್ಯ ಮನುಷ್ಯರನ್ನೇ ಮಾಂತ್ರಿಕವಾಗಿ ಮಾಯಾ ರೂಪದಲ್ಲೇ ತಿನ್ನುವ ರಣ ಹದ್ದುಗಳ ಜೀಮೂತ ಮಾನವರ ಬೇಟೆಗೆ ಏನೆಂದೆನ್ನುವುದು. ಬೇಟೆಯಾಡುವ ಸಮಾಜಗಳಲ್ಲಿ ಎಷ್ಟೆಲ್ಲ ರಣರಂಗ, ಎಷ್ಟೊಂದೆಲ್ಲ ರಣ ಹದ್ದುಗಳು... ಆಹಾ! ಎಷ್ಟೊಂದು ಸುಂದರ ಜೀಮೂತ ಪಕ್ಷಿಗಳು. ಅವು ಕುಕ್ಕಿ ಕುಕ್ಕಿ ತಿನ್ನುವುದರ ನೋವೇ ಗೊತ್ತಾಗದೆ, ಆಹಾ ನೊಟ್ಟೆಗಾಯಿತು ಎಂಬ ಸ್ಥಿತಿ ಇದೆಯಲ್ಲಾ... ಎಂದು ಆ ರಣಹದ್ದಿನ ಬಾಯಲ್ಲಿ ಅರೆ ಜೀವದ ತಿನಿಸೊಂದು ನುಡಿಯಿತು.

ಮನುಷ್ಯತ್ವವನ್ನು ತಿನ್ನುತ್ತಿರುವ ಈ ರಣ ಹದ್ದುಗಳನ್ನು ಕಂಡ ಆ ನಿಜವಾದ ಹೆಣಗಳ ತಿನ್ನುವ ಹದ್ದುಗಳು ಹೆದರಿ ಹಾರಿ ಹಾರಿ ದೂರ ಬಂದು ಉನ್ನತವಾದ ಆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಲಶದ ತುದಿಯಲ್ಲಿ ಕುಳಿತು ತಮ್ಮ ಕೊಕ್ಕುಗಳ ಕತ್ತರಿಸಿಕೊಂಡು, ಅಭಿವೃದ್ಧಿಯ ಎಲುಬುಗಳ ರಾಶಿಯ ಮೇಲೆ ಹಿಕ್ಕೆ ಹಾಕುತ್ತಾ, ಈ ಹತ್ಯೆಗಳಲ್ಲಿ ತಮ್ಮ ಪಾಲು ಇಲ್ಲ ಎಂದು ಕ್ರೌಂಚ ಪಕ್ಷಿಯು ನೆತ್ತರಲ್ಲಿ ಹೊರಳಾಡಿದಂತೆ ಜಗತ್ತಿಗೇ ಕೂಗುತ್ತಿದ್ದವು. ಹಿಂಸೆಯ ಮುಗಿಲು ದಿಗಂತದಲ್ಲಿ ನೆತ್ತರಲ್ಲಿ ಹೆಪ್ಪುಗಟ್ಟಿತು. ಆ ರಣ ಹದ್ದುಗಳೆಲ್ಲ ಒಂದಾಗಿ ಸೂರ್ಯನ ಮುಂದೆ ಅಹಿಂಸೆಯ ದೀಕ್ಷೆ ಪಡೆದು ಸಾಂತ್ವನದ ಇರುಳನ್ನು ನೊಂದವರ ಎದೆಯಲ್ಲಿ ಬಿತ್ತಿ ನಾಳೆಯ ಹಗಲಿಗಾಗಿ ಕಾಯುತ್ತಿದ್ದವು.

ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನಹಳ್ಳಿಯ ಗಣೇಶ್, ಕನ್ನಡ ಕಥನ ಪರಂಪರೆಗೆ ಹೊಸತನ ನೀಡಿದ ಕಥೆಗಾರ. ಕಾವ್ಯ, ವಿಮರ್ಶೆ, ಜಾನಪದ ಕ್ಷೇತ್ರಗಳಲ್ಲೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. 'ಬುಗುರಿ', 'ಮಣ್ಣು', 'ಅತ್ತೆ', 'ಭೂಮಿ', 'ಕನ್ನೆಮಳೆ', 'ಮೊಗಳ್ಳಿ ಕಥೆಗಳು' (ಆವರೆಗಿನ ಬಹುಪಾಲು ಕಥೆಗಳ ಸಂಕಲನ), 'ದೇವರ ದಾರಿ' ಪ್ರಕಟಿತ ಕಥಾಸಂಗ್ರಹಗಳು. 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಅವರ ಕತೆಗಳು ನಾಲ್ಕು ಬಾರಿ ಬಹುಮಾನ ಪಡೆದಿವೆ.